ಕನ್ನಡ ಸಾಹಿತ್ಯದಲ್ಲಿ ಇತ್ತೀಚೆಗೆ ಉತ್ತಮ ಬೆಳೆ ಬರುತ್ತಿದೆ. ಹತ್ತಾರು ಕೃತಿಗಳು ಓದುಗರ ಗಮನ ಸೆಳೆದು ಮರೆಯಾಗುತ್ತಿವೆ. ಹಾಗೆ ಮರೆಯಾಗುವ ಕೃತಿಗಳಲ್ಲಿ ಮನದಲ್ಲಿ ಉಳಿದುಕೊಳ್ಳುವ ಪುಸ್ತಕಗಳ ಸಂಖ್ಯೆ ಬಹಳ ಕಡಿಮೆ. ಬದುಕಿನ ಹಲವು ಪದರಗಳನ್ನು ತೆರೆದು ತೋರುವ, ಎಲ್ಲ ಕಾಲಕ್ಕೂ ಸಲ್ಲುವ ಕೃತಿಗಳನ್ನು ಓದಬೇಕಾದರೆ ಕನ್ನಡ ಓದುಗರು ಹಿಂದಿನ ಲೇಖಕರ ಪುಸ್ತಕಗಳಿಗೇ ಹೋಗಬೇಕಿದೆ. ಅದು ಕುವೆಂಪು, ಕಾರಂತ, ಬೇಂದ್ರೆ, ಮಾಸ್ತಿ, ಅಡಿಗ, ನರಸಿಂಹಸ್ವಾಮಿ, ಲಂಕೇಶ್, ಅನಂತಮೂರ್ತಿ, ತೇಜಸ್ವಿ, ಚಿತ್ತಾಲ, ಪುಣೇಕರ, ಕಂಬಾರ, ದೇವನೂರ, ವೈದೇಹಿ, ಪ್ರತಿಭಾ ನಂದಕುಮಾರ್, ಜಯಂತ ಕಾಯ್ಕಿಣಿ ಕೃತಿಗಳಿಗೆ ಮತ್ತು ಕನ್ನಡದ ಹಲವು ಮುಖ್ಯ ಪುಸ್ತಕಗಳಿಗೆ ಬಂದು ನಿಲ್ಲುತ್ತದೆ. ಹೀಗಾಗಿ ಕ್ಲಾಸಿಕ್ (ಅಭಿಜಾತ) ಕೃತಿಗಳ ಕುರಿತಂತೆ ವಿಮರ್ಶಕರಿಗೆ 'ಮಯೂರ' ಕೆಲವು ಪ್ರಶ್ನೆಗಳನ್ನು ಕೇಳಿತ್ತು. ಆ ಕುರಿತ ಟಿಪ್ಪಣಿಗಳು ಮುಂದಿನ ಪುಟಗಳಲ್ಲಿವೆ.

## ಪ್ರಶ್ನೆಗಳು

**1** ಅಭಿಜಾತ ಕೃತಿಗಳು ಇತ್ತೀಚೆಗೆ ಸೃಷ್ಟಿಯಾಗದಿರುವುದು ಕನ್ನಡದ ಸಮಸ್ಯೆ ಮಾತ್ರವೇ? ಎಲ್ಲ ಭಾಷೆಗಳಲ್ಲೂ ಎಲ್ಲ ಕಾಲದಲ್ಲೂ ಓದಬಲ್ಲ ಪುಸ್ತಕಗಳು ಕಡಿಮೆ ಸಂಖ್ಯೆಯಲ್ಲಿರುತ್ತವೆಯೇ?

**2** ಸಮಕಾಲೀನ ಬದುಕನ್ನು ದಟ್ಟವಾಗಿ, ಮತ್ತು ದಿಟ್ಟವಾಗಿ ಹಿಡಿಯುವಲ್ಲಿ ಕನ್ನಡ ಲೇಖಕರು ಸೋಲುತ್ತಿದ್ದಾರೆಯೇ?

**3** ಇದು ಪ್ರತಿಭೆಯ, ಪ್ರತಿಭಾವಂತರ ಕ್ರಿಯಾಶೀಲತೆಯ ಅಥವಾ ಗ್ರಹಿಕೆಯ ಸಮಸ್ಯೆಯೇ? ಅದು ಈಗಿನ ಲೇಖಕರ ಮಿತಿಯೇ? ಇದಕ್ಕಿರುವ ಕಾರಣಗಳು ಏನಿರಬಹುದು?

**4** ಈಗಿನ ದುರಿತದ ಕಾಲವನ್ನು ಮುಖಾಮುಖಿಯಾಗಲು ಅದಕ್ಕೆ ತಕ್ಕ ಮಾತುಗಳನ್ನು ಸಾಹಿತ್ಯದ ಮೂಲಕವೇ ಕೊಡಲು ಇತ್ತೀಚಿನ ಕನ್ನಡ ಲೇಖಕರು ವಿಫಲರಾಗಿದ್ದಾರೆ ಎಂದು ಅನ್ನಿಸುವುದಿಲ್ಲವೇ?

**5** ಸಮಕಾಲೀನ ರಾಜಕೀಯ ಸಂದರ್ಭಕ್ಕೆ ಕನ್ನಡ ಸಾಹಿತ್ಯದ ಎಲ್ಲ ಪ್ರಕಾರಗಳೂ ಸೃಜನಶೀಲವಾಗಿ ಬೆನ್ನುಹಾಕಿ ಮಲಗಿವೆ. ಉದಾಹರಣೆಗೆ: ಅಡಿಗರ 'ನೆಹರೂ ನಿವೃತ್ತರಾಗುವುದಿಲ್ಲ' ತರಹದ ಕವಿತೆಗಳು ಈಗ ಯಾಕೆ ಬರುವುದಿಲ್ಲ?

**6** ನಿಮ್ಮ ದೃಷ್ಟಿಯಲ್ಲಿ ಕ್ಲಾಸಿಕ್ ಎನ್ನಬಹುದಾದ ಇತ್ತೀಚಿನ (10 ವರ್ಷಗಳ ಅವಧಿಯಲ್ಲಿ ಬಂದ) ಪುಸ್ತಕಗಳು ಯಾವುವು? ಯಾಕೆ?

